**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ**

**ನ್ಯಾಯಾಲಯದಲ್ಲಿ ಕುಮಟಾ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 191/2019**

ಫಿರ್ಯಾದಿ .... ಕನಾಟಕ ಸರ್ಕಾರ

ವಿರುದ್ಧ

ಆರೋಪಿ . . . .ಮಹಮ್ಮದ ಲಿಯಾಖತ್ ಮತ್ತು ಇನ್ನೊಬ್ಬರು

**ದೋಷಾರೋಪಣೆ**

**ದೋಷಾರೊಪಣಾ**

ಶ್ರೀ ವಿಘ್ನೇಶ ಕುಮಾರ್, ಬಿ.ಎ., ಎಲ್.ಎಲ್.ಎಮ್ .,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಪಕ ದಂಡಾಧಿಕಾರಿಯಾದ

ನಾನು ನಿಮ್ಮ ಅಂದರೆ –

1. ಮಹಮ್ಮದ ಅಹ್ಮದ ಮುನಿಗಾರ್ ಲಿಯಾಖತ್
   ವಯಸ್ಸುಃ 23 ವರ್ಷ
   ವಾಸಃ ಕಾಸರಕೋಡ, ಹೊನ್ನಾವರ, ಹಾಲಿ ಭಟ್ಕಳ

2. ಸಮೀರ್ ನಜೀರ ಅಹಮ್ಮದ ಖಾನ್
   ವಯಸ್ಸುಃ 21 ವರ್ಷ
   ವಾಸಃ ಭಟ್ಕಳ

ಮೇಲೆ ಆಪಾದಿಸುವುದೇನೆಂದರೆ

ದಿನಾಂಕ 14.9.2017 ರಂದು ಬೆಳಿಗ್ಗೆ 4.30 ಗಂಟೆಯ ಸುಮಾರಿಗೆ ಆರೋಪಿತರಾದ ನೀವು ಕುಮಟಾ ತಾಲೂಕಿನ ದುಂಡಕುಳಿಯಲ್ಲಿರುವ ಶ್ರೀ ಬೊಂಬೆ ಲಿಂಗೇಶ್ವರ ದೇವಸ್ಥಾನದಲ್ಲಿ ಕನ್ನ ಹಾಕುವ ಉದ್ದೇಶದಿಂದ ಗೃಹಾತೀಕ್ರಮಣ ಮಾಡಿ ತನ್ಮೂಲಕ ಭಾ.ದಂ.ಸಂ.ಕಲಂ 457 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ನನ್ನ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಅದೇ ದಿನ ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಆರೋತರಾದ ನೀವು ಶ್ರೀ ಬೊಂಬೆ ಲಿಂಗೇಶ್ವರ ದೇವಸ್ಥಾನದ ಬಾಗಿಲನ್ನು ಕಬ್ಬಿಣ ರಾಡಿನಿಂದ ಮುರಿದು ಒಳಗೆ ಪ್ರವೇಶಿಸಿ , ಗರ್ಭಗುಡಿಗೆ ಹಾಕಿದ್ದ ಬೀಗವನ್ನು ಮುರಿದು ಒಳಗೆ ಪ್ರವೇಶಿಸಿ 3 ಬೆಳ್ಳಿಯ ಚೈನು ಮತ್ತು ಬೆಳ್ಳಿಯ ದೇವರ ಕಿರೀಟವನ್ನು

ಕಳುವು ಮಾಡಿದ್ದು ತನ್ಮೂಲಕ ಭಾ.ದಂ.ಸಂ.ಕಲಂ 380 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ನನ್ನ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಸದ್ರಿ ಅಪಾದನೆಯ ಅಧಿವಿಚಾರಣೆಯು ನಿಮ್ಮ ವಿರುದ್ಧ ನನ್ನ ಮುಂದೆ ಜರುಗತ್ತದೆಂದು ನಾನು ನಿರ್ದೇಶಿಸುತ್ತೇನೆ .

ದಿನಾಂಕಃ 30.12.2019

sd/-

**ಶ್ರೀ ವಿಘ್ನೇಶ ಕುಮಾರ್,**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಕುಮಟಾ**